ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟ
UNIVERSITY OF HORTICULTURAL SCIENCES, BAGALKOT
I.C.A.R - KRISHI VIGYAN KENDRA, KOLAR
ಐ.ಸಿ.ಎ.ಆರ್ – ಕೃಷಿ ವಿಜ್ಞಾನ ಕೇಂದ್ರ, ಕೋಲಾರ



# e- NEWS LETTER / ಇ– ವಾರ್ತಾ ಪತ್ರಿಕೆ

ಅಕ್ಟೋಬರ್ – ಡಿಸೆಂಬರ್, 2016 ಸಂಚಿಕೆ : 4 ಸಂಪುಟ : 3

## ಗೌರವಾನ್ವಿತ ಕುಲಪತಿಗಳ ನುಡಿ



ಡಾ. ಡಿ. ಎಲ್. ಮಹೇಶ್ವರ್

ಕೃಷಿ ವಿಜ್ಞಾನ ಕೇಂದ್ರ, ಕೋಲಾರದ ಕೃಷಿಗೆ ಸಂಬಂಧಪಟ್ಟ ಇತರೆ ಇಲಾಖೆಗಳ ಸಹಯೋಗದಲ್ಲಿ ಜಿಲ್ಲೆಯ ರೈತರಿಗೆ ಮಣ್ಣಿನ ಸಂರಕ್ಷಣೆ ಹಾಗೂ ಹಿಂಗಾರು ಅವಧಿಯಲ್ಲಿ ಬೆಳೆ ಪದ್ಧತಿಯ ನಿರ್ವಹಣೆ ಬಗ್ಗೆ ವಿಶ್ವ ಮಣ್ಣು ಆರೋಗ್ಯ ದಿನಾಚರಣೆ ಮತ್ತು ಹಿಂಗಾರು ಅರಿವು ಶಿಬಿರ, ನೂತನ ತಾಂತ್ರಿಕತೆಗಳನ್ನು ರೈತರಿಗೆ ತಲುಪಿಸುವ ನಿಟ್ಟಿನಲ್ಲಿ ತಂತ್ರಜ್ಞಾನ ಸಪ್ತಾಹ ಮತ್ತು ರೈತ ದಿನಾಚರಣೆಯನ್ನು ಹಮ್ಮಿಕೊಂಡಿರುವುದು ಸಂತೋಷದಾಯಕ. ಕೇಂದ್ರ ಸರ್ಕಾರ ಹಾಗೂ ಭಾರತೀಯ ಕೃಷಿ ಅನುಸಂಧಾನ ಪರಿಷತ್ತು, ನವದೆಹಲಿ ಇವರ ನಿರ್ದೇಶನದಂತೆ ಜಿಲ್ಲೆಯ ವಿವಿಧ ಗ್ರಾಮಗಳಲ್ಲಿ ಸ್ವಚ್ಛತಾ ಪಾಕ್ಷಿಕ ಸಭೆಯನ್ನು ಹಮ್ಮಿಕೊಂಡಿದ್ದು, ರೈತರಿಗೆ ಕೃಷಿ ತ್ಯಾಜ್ಯಗಳನ್ನು ಬಳಸಿಕೊಂಡು ಸುಧಾರಿತ ಸಾವಯವ ಗೊಬ್ಬರ ಉತ್ಪಾದನೆ ಬಗ್ಗೆ ಮಾಹಿತಿ ನೀಡಿರುವುದು ಉತ್ತಮ ನಡೆ. ಸ್ವಸಹಾಯ ಸಂಘದ ಮಹಿಳೆಯರಿಗೆ ಮೌಲ್ಯವರ್ಧನೆ ತರಬೇತಿ, ಅಂಗನವಾಡಿ ಕಾರ್ಯಕರ್ತೆಯರಿಗೆ ಸಮತೋಲಿತ ಆಹಾರದ ಮಹತ್ವ ಹಾಗೂ ರೇಷ್ಮೆ ಬೆಳೆಗಾರರಿಗೆ ತಾಂತ್ರಿಕ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು, ಇನ್ನು ಹೆಚ್ಚಿನ ಪರಿಣಾಮಕಾರಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಪ್ರಗತಿ ಸಾಧಿಸಲೆಂದು ಹಾರೈಸುತ್ತೇನೆ.

## ವಿಶ್ವ ಮಣ್ಣು ಆರೋಗ್ಯ ದಿನಾಚರಣೆ ಹಾಗೂ ಹಿಂಗಾರು ಅರಿವು ಶಿಬಿರ–2016

ದಿನಾಂಕ 05.10.2016 ರಂದು ಕೃಷಿ ವಿಜ್ಞಾನ ಕೇಂದ್ರ, ಕೋಲಾರವು ಕೃಷಿ ಇಲಾಖೆ, ತೋಟಗಾರಿಕೆ ಮಹಾವಿದ್ಯಾಲಯ ಹಾಗೂ ಸಮಗ್ರ ಕೃಷಿ ಪದ್ಧತಿ ಘಟಕ, ಕೋಲಾರ ಇವರ ಸಹಯೋಗದಲ್ಲಿ **"ವಿಶ್ವ ಮಣ್ಣು ಆರೋಗ್ಯ ದಿನಾಚರಣೆ ಹಾಗೂ ಹಿಂಗಾರು ಅರಿವು ಶಿಬಿರ–2016"** ಆಯೋಜಿಸಲಾಗಿತ್ತು. ಶ್ರೀಮತಿ ಗೀತಮ್ಮ ಜಿ. ಆನಂದರೆಡ್ಡಿ, ಅಧ್ಯಕ್ಷರು, ಜಿಲ್ಲಾ ಪಂಚಾಯತ್, ಕೋಲಾರ ಇವರು ಕಾರ್ಯಕ್ರಮವನ್ನು ಉದ್ಘಾಟಿಸಿ ರೈತರು ಸಾವಯವ ಕೃಷಿ ಪದ್ಧತಿಯನ್ನು ಅಳವಡಿಸಿಕೊಂಡು ರಾಸಾಯನಿಕ ಗೊಬ್ಬರದ ಬಳಕೆಯನ್ನು ಕಡಿಮೆ ಮಾಡಬೇಕೆಂದು ರೈತರಿಗೆ ಸಲಹೆ ನೀಡಿದರು. ಮುಖ್ಯ ಅತಿಥಿಗಳಾಗಿ ಶ್ರೀ. ವಡಗೂರು ಡಿ.ಎಲ್. ನಾಗರಾಜ್, ಜಿಲ್ಲಾಧ್ಯಕ್ಷರು, ಕರ್ನಾಟಕ ಪ್ರದೇಶ ಕೃಷಿಕ ಸಮಾಜ, ಶ್ರೀಮತಿ ಬಿ.ಬಿ. ಕಾವೇರಿ, ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ಕೋಲಾರ, ಡಾ. ಕೆ.ಎನ್. ಶ್ರೀನಿವಾಸ್, ಡೀನ್, ತೋಟಗಾರಿಕೆ ಮಹಾವಿದ್ಯಾಲಯ, ಕೋಲಾರ ಡಾ. ಶಿವಕುಮಾರ್ ಹೆಚ್.ಕೆ,



ಜಂಟಿ ನಿರ್ದೇಶಕರು, ಕೃಷಿ ಇಲಾಖೆ, ಡಾ. ನಯೀಮ್ ಪಾಷಾ, ಉಪನಿರ್ದೇಶಕರು, ಕೃಷಿ ಇಲಾಖೆ, ಶ್ರೀ ಎಂ.ಎಸ್. ರಾಜು, ಉಪನಿರ್ದೇಶಕರು, ತೋಟಗಾರಿಕೆ ಇಲಾಖೆ, ಶ್ರೀ ಎಸ್.ವಿ. ಕುಮಾರ್, ಉಪನಿರ್ದೇಶಕರು, ರೇಷ್ಮೆ ಇಲಾಖೆ ಹಾಗೂ ಕೃಷಿ ವಿಜ್ಞಾನ ಕೇಂದ್ರ ಕೋಲಾರದ ಮುಖ್ಯಸ್ಥರಾದ ಕೆ. ತುಳಸಿರಾಮ್ ಭಾಗವಹಿಸಿದ್ದರು. ಸಂಪನ್ಮೂಲ ವ್ಯಕ್ತಿಗಳಾಗಿ ಡಾ. ಹಿತ್ತಲಮನಿ, ನಿವೃತ್ತ ಅಪರ ನಿರ್ದೇಶಕರು, ತೋಟಗಾರಿಕೆ ಇಲಾಖೆ, ಬೆಂಗಳೂರು ಭಾಗವಹಿಸಿ ತೋಟಗಾರಿಕೆ ಬೆಳೆಗಳಲ್ಲಿ ಮಣ್ಣಿನ ಸಂರಕ್ಷಣೆ ಮತ್ತು ನಿರ್ವಹಣೆ, ಡಾ. ರಾಧಾಕೃಷ್ಣ, ನಿವೃತ್ತ ಪ್ರಾಧ್ಯಾಪಕರು, ಕೃಷಿ ಸೂಕ್ಷ್ಮಾಣು ಜೀವಿ ಶಾಸ್ತ್ರ, ಕೃಷಿ ವಿಶ್ವವಿದ್ಯಾನಿಲಯ, ಜಿ.ಕೆ.ವಿಕೆ. ಬೆಂಗಳೂರುರವರು ಮಣ್ಣಿನ ಫಲವತ್ತತೆಯಲ್ಲಿ ಸೂಕ್ಷ್ಮಾಣು ಜೀವಿಗಳ ಪಾತ್ರ, ಡಾ. ರಘುನಾಥರೆಡ್ಡಿ ಆರ್.ಎಲ್, ವಿಜ್ಞಾನಿ (ಮಣ್ಣು ವಿಜ್ಞಾನ) ರವರು ಕೃಷಿ ಮತ್ತು ತೋಟಗಾರಿಕೆ ಬೆಳೆಗಳಲ್ಲಿ ಮಣ್ಣಿನ ಫಲವತ್ತತೆ ಹಾಗೂ ನಿರ್ವಹಣೆ ಬಗ್ಗೆ ರೈತರಿಗೆ ಮಾಹಿತಿ ನೀಡಿದರು. ಪ್ರಗತಿಪರ ರೈತರಾದ ಶ್ರೀ. ಎ. ವೆಂಕಟೇಶಗೌಡರವರು ಕೃಷಿಗೆ ಸಂಬಂಧಿಸಿದ ವಿಚಾರಗಳ ಬಗ್ಗೆ ರೈತರಿಗೆ ಮಾಹಿತಿ ನೀಡಿದರು. ನಂತರ ಕೃಷಿ ವಸ್ತು ಪ್ರದರ್ಶನದಲ್ಲಿ ಕೃಷಿ ವಿಜ್ಞಾನ ಕೇಂದ್ರ, ಕೃಷಿ, ರೇಷ್ಮೆ, ತೋಟಗಾರಿಕೆ, ಪಶುಪಾಲನ ಮತ್ತು ಪಶುವೈದ್ಯ ಸೇವಾ ಇಲಾಖೆಗಳು ಮತ್ತು ಬ್ರೇಸ್ ಸಂಸ್ಥೆ ವತಿಯಿಂದ ತಾಂತ್ರಿಕತೆಗಳಿಗೆ ಸಂಬಂಧಿಸಿದ ಮಾಹಿತಿಯನ್ನು ವಸ್ತು ಪ್ರದರ್ಶನದ ಮಳಿಗೆಗಳಲ್ಲಿ ಪ್ರದರ್ಶಿಸಲಾಯಿತು. ಸುಮಾರು 100 ರೈತರಿಗೆ ಮಣ್ಣಿನ ಆರೋಗ್ಯ ಚೀಟಿಗಳನ್ನು ಕಾರ್ಯಕ್ರಮದಲ್ಲಿ ವಿತರಿಸಲಾಯಿತು. ಸದರಿ ಕಾರ್ಯಕ್ರಮದಲ್ಲಿ ತೋಟಗಾರಿಕೆ ಮಹಾವಿದ್ಯಾಲಯದ ಎಲ್ಲ ಬೋಧಕ ಸಿಬ್ಬಂದಿಗಳು, ಕೃಷಿ ವಿಜ್ಞಾನ ಕೇಂದ್ರದ ಎಲ್ಲ ವಿಜ್ಞಾನಿಗಳು ಹಾಗೂ 300 ರೈತ ಹಾಗೂ ರೈತ ಮಹಿಳೆಯರು ಭಾಗವಹಿಸಿ ಇದರ ಸದುಪಯೋಗವನ್ನು ಪಡೆದುಕೊಂಡರು.



## ಸ್ವಚ್ಚತಾ ಪಾಕ್ಷಿಕ ಸಭೆ

ಕೇಂದ್ರ ಸರ್ಕಾರ ಹಾಗೂ ಭಾರತೀಯ ಕೃಷಿ ಅನುಸಂಧಾನ ಪರಿಷತ್ತು, ನವದೆಹಲಿ ಇವರ ನಿರ್ದೇಶನದಂತೆ ಕೃಷಿ ವಿಜ್ಞಾನ ಕೇಂದ್ರ, ಕೋಲಾರವು ದಿನಾಂಕ 16.10.2016 ರಿಂದ 31.10.2016 ರವರೆಗೆ ಜಿಲ್ಲೆಯ ವಿವಿಧ ಗ್ರಾಮಗಳಲ್ಲಿ **"ಸ್ವಚ್ಚತಾ ಪಾಕ್ಷಿಕ ಸಭೆ"**ಯನ್ನು ಹಮ್ಮಿಕೊಳ್ಳಲಾಯಿತು. ಸದರಿ ಕಾರ್ಯಕ್ರಮದಲ್ಲಿ ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥರು ಹಾಗೂ ಎಲ್ಲಾ ವಿಜ್ಞಾನಿಗಳು ಗ್ರಾಮಗಳಿಗೆ ಭೇಟಿ ನೀಡಿ ನಮ್ಮ ಸುತ್ತಮುತ್ತಲಿನ ಪರಿಸರದಲ್ಲಿ ಸ್ವಚ್ಚತೆಯನ್ನು ಕಾಪಾಡುವ ಬಗ್ಗೆ ಹಾಗೂ ಕೃಷಿಯಲ್ಲಿ ಲಭ್ಯವಾಗುವಂತಹ ಸಾವಯವ ತ್ಯಾಜ್ಯಗಳನ್ನು ಬಳಸಿಕೊಂಡು ಸುಧಾರಿತ ಕಾಂಪೋಸ್ಟ್ ತಯಾರಿಕಾ ಪದ್ದತಿಗಳ ಬಗ್ಗೆ ಗ್ರಾಮಸ್ಥರಲ್ಲಿ ಅರಿವು ಮೂಡಿಸಲಾಯಿತು.

| ಕ್ರ.ಸಂ | ದಿನಾಂಕ | ವಿಷಯ | ಗ್ರಾಮ | ಭಾಗವಹಿಸಿದವರು |
|---|---|---|---|---|
| 1. | 17.10.2016 | ರೇಷ್ಮೆ ಹುಳು ಸಾಕಾಣಿಕೆಯಲ್ಲಿ ಸೊಂಕು ನಿವಾರಣೆ ಮತ್ತು ನೈರ್ಮಲ್ಯತೆಯ ಮಹತ್ವ | ನಾಗನಾಳ | ಡಾ. ಶಶಿಧರ್ ಕೆ.ಆರ್<br>ಡಾ. ರಘುನಾಥರೆಡ್ಡಿ ಆರ್.ಎಲ್ |
| 2. | 19.10.2016 | ಮಾವು ಉತ್ಪಾದನೆಯಲ್ಲಿ ಸಮಗ್ರ ಪೋಷಕಾಂಶಗಳ ನಿರ್ವಹಣೆ ಹಾಗೂ ಸಂಸ್ಕರಣೆ | ಚಿರುವನಹಳ್ಳಿ | ಕೆ. ತುಳಸಿರಾಮ್<br>ಡಾ. ಸಂತೋಷ್ ಹೆಚ್.ಎಂ |
| 3. | 19.10.2016 | ಸಾವಯವ ಪದ್ಧತಿಯಲ್ಲಿ ಹಿಪ್ಪುನೇರಳೆ ಮರ ಬೇಸಾಯ ಮತ್ತು ಕಾಂಪೋಸ್ಟ್ ತಯಾರಿಕೆ | ಕೆ.ವಿ.ಕೆ. ಕೋಲಾರ | ಡಾ. ಶಶಿಧರ್ ಕೆ.ಆರ್<br>ಡಾ. ರಘುನಾಥರೆಡ್ಡಿ ಆರ್.ಎಲ್ |
| 4. | 26.10.2016 | ತೋಟಗಾರಿಕೆ ಮಹಾವಿದ್ಯಾಲಯ ಮತ್ತು ಕೃಷಿ ವಿಜ್ಞಾನ ಕೇಂದ್ರ, ಆವರಣದ ಸ್ವಚ್ಚತಾ ಕಾರ್ಯಕ್ರಮ | ತೋ.ಮ.ವಿ, ಕೋಲಾರ | ಎಲ್ಲಾ ಪ್ರಾಧ್ಯಪಕ ವೃಂದ ಹಾಗೂ ವಿದ್ಯಾರ್ಥಿಗಳು |
| 5. | 26.10.2016 | ಸುಧಾರಿತ ಸಾವಯವ ಗೊಬ್ಬರ ಉತ್ಪಾದನೆ ಪದ್ಧತಿಯಲ್ಲಿ ಎರೆಹುಳು ಗೊಬ್ಬರದ ಮಹತ್ವ | ದೊಡ್ಡವಲಗಮಾದಿ | ಡಾ. ಶಶಿಧರ್ ಕೆ.ಆರ್<br>ಡಾ. ನಾಗರಾಜ ಕೆ.ಎಸ್. |
| 6. | 28.10.2016 | ರೇಷ್ಮೆ ಹುಳು ಸಾಕಾಣಿಕೆ ತ್ಯಾಜ್ಯಗಳಿಂದ ಕಾಂಪೋಸ್ಟ್ ತಯಾರಿಕೆ | ಯಲವಗುಳಿ | ಡಾ. ಶಶಿಧರ್ ಕೆ.ಆರ್<br>ಡಾ. ನಾಗರಾಜ ಕೆ.ಎಸ್. |
| 7. | 28.10.2016 | ಸುಧಾರಿತ ಸಾವಯವ ಗೊಬ್ಬರ ಮತ್ತು ಎರೆಗೊಬ್ಬರ ಉತ್ಪಾದನಾ ತಾಂತ್ರಿಕತೆಗಳು | ಮುಳ್ಳಹಳ್ಳಿ | ಕೆ. ತುಳಸಿರಾಮ್<br>ಡಾ. ಸಂತೋಷ್ ಹೆಚ್.ಎಂ |

# ತಂತ್ರಜ್ಞಾನ ಸಪ್ತಾಹ–2016

ಕೃಷಿ ವಿಜ್ಞಾನ ಕೇಂದ್ರ ವತಿಯಿಂದ ಕೋಲಾರ ಜಿಲ್ಲೆಯ ರೈತ ಮತ್ತು ರೈತ ಮಹಿಳೆಯರಿಗೆ ದಿನಾಂಕ 21.12.2016 ರಿಂದ 25.12.2016 ರವರೆಗೆ **"ತಂತ್ರಜ್ಞಾನ ಸಪ್ತಾಹ–2016"** ಕಾರ್ಯಕ್ರಮವನ್ನು ಕೃಷಿ, ತೋಟಗಾರಿಕೆ, ರೇಷ್ಮೆ ಹಾಗೂ ಪಶುಪಾಲನ ಇಲಾಖೆಗಳು ಮತ್ತು ಸರ್ಕಾರೇತರ







ಸಂಸ್ಥೆಗಳಾದ MYRADA, ಧಾನ್ ಫೌಂಡೇಶನ್, ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಕೋಲಾರ ಇವರ ಸಹಭಾಗಿತ್ವದಲ್ಲಿ ತೋಟಗಾರಿಕೆ ಮಹಾವಿದ್ಯಾಲಯದ ವಿಚಾರ ಸಂಕಿರಣ ಕೊಠಡಿಯಲ್ಲಿ ಆಯೋಜಿಸಲಾಗಿತ್ತು. ಕೋಲಾರದ ತೋಟಗಾರಿಕೆ ಇಲಾಖೆಯ ಉಪ ನಿರ್ದೇಶಕರಾದ ಡಾ. ಎಂ.ಎಸ್ ರಾಜುರವರು ಉದ್ಘಾಟನೆ ನೆರವೇರಿಸಿ ತಂತ್ರಜ್ಞಾನ ಸಪ್ತಾಹಕ್ಕೆ ಚಾಲನೆ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥರಾದ ಕೆ. ತುಳಸಿರಾಮ್ ವಹಿಸಿದ್ದರು. ತಂತ್ರಜ್ಞಾನ ಸಪ್ತಾಹದಲ್ಲಿ ತರಕಾರಿ ಬೆಳೆಗಳಲ್ಲಿ ಕಸಿ ತಂತ್ರಜ್ಞಾನ, ಪ್ರಮುಖ ತರಕಾರಿ ಬೆಳೆಗಳಲ್ಲಿ ಆಧುನಿಕ ಬೇಸಾಯ ಕ್ರಮಗಳು ಹಾಗೂ ಸಸ್ಯ ಸಂರಕ್ಷಣೆ, ಕೀಟನಾಶಕಗಳ ಸುರಕ್ಷಿತ ಬಳಕೆ ಹಾಗೂ ಸಮಗ್ರ ಪೀಡೆ ನಿರ್ವಹಣೆಯ ಮಹತ್ವ, ರಫ್ತಿಗಾಗಿ ಮಾವಿನ ಹಣ್ಣಿನ ಗುಣಮಟ್ಟ ಮತ್ತು ಕೊಯ್ಲೋತ್ತರ ಹಾಗೂ ಮಾವಿನಲ್ಲಿ ಕೀಟ ಮತ್ತು ರೋಗಗಳ ನಿರ್ವಹಣೆ, ಒಣಬೇಸಾಯದಲ್ಲಿ ಹಿಪ್ಪುನೇರಳೆ ಮರಪದ್ಧತಿಯ ಪ್ರಾಮುಖ್ಯತೆ ಹಾಗೂ ದ್ವಿತಳಿ ಹುಳು ಸಾಕಾಣಿಕೆ ತಾಂತ್ರಿಕತೆಗಳಿಗೆ ಸಂಬಂಧಿಸಿದಂತೆ ಕೃಷಿ ವಿಜ್ಞಾನ ಕೇಂದ್ರ, ಕೋಲಾರದ ವಿಜ್ಞಾನಿಗಳಾದ ಕೆ. ತುಳಸಿರಾಮ್, ಡಾ. ಆರ್.ಎಲ್. ರಘುನಾಥರೆಡ್ಡಿ, ಡಾ. ಶಶಿಧರ್ ಕೆ. ಆರ್, ಡಾ. ನಾಗರಾಜ ಕೆ.ಎಸ್. ಡಾ. ಸಂತೋಷ ಹೆಚ್. ಎಂ., ತೋಟಗಾರಿಕೆ ಮಹಾವಿದ್ಯಾಲಯ, ಕೋಲಾರದ ಸಹಾಯಕ ಪ್ರಾಧ್ಯಾಪಕರಾದ ಡಾ. ಸದಾನಂದ ಮುಶ್ರೀಫ್ ಹಾಗೂ ಡಾ. ಜೆ.ಎಸ್. ಅರವಿಂದಕುಮಾರ್ ಭಾಗವಹಿಸಿ ತಾಂತ್ರಿಕ ಮಾಹಿತಿ ನೀಡಿದರು. ಸದರಿ ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ತೋಟಗಾರಿಕೆ ಮಹಾವಿದ್ಯಾಲಯದ ಡೀನ್‌ರಾದ ಡಾ. ಕೆ.ಎನ್. ಶ್ರೀನಿವಾಸ್, ಆವಣಿ ರೈತ ಸಂಪರ್ಕ ಕೇಂದ್ರದ ಕೃಷಿ ಅಧಿಕಾರಿ ಮಂಜುನಾಥ್, ಧಾನ್ ಫೌಂಡೇಶನ್‌ನ ರಾಘವೇಂದ್ರ, ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸತೀಶ್ ಶೆಟ್ಟಿ ಭಾಗವಹಿಸಿದ್ದರು. ಸುಮಾರು 300 ರೈತ ಮತ್ತು ರೈತಮಹಿಳೆಯರು, ಸ್ವಸಹಾಯ ಸಂಘದ ಮಹಿಳೆಯರು ಭಾಗವಹಿಸಿ ಇದರ ಸದುಪಯೋಗವನ್ನು ಪಡೆದುಕೊಂಡರು.

# ರೈತ ದಿನಾಚರಣೆ (ಕಿಸಾನ್ ದಿವಸ್)

ದಿನಾಂಕ 23.12.2016 ರಂದು ಕೋಲಾರ ತಾಲ್ಲೂಕಿನ ಹೋಳೂರು ಹೋಬಳಿಯ ಗಟ್ಟಹಳ್ಳಿ ಗ್ರಾಮದಲ್ಲಿ ಕೃಷಿ ವಿಜ್ಞಾನ ಕೇಂದ್ರ, ಕೋಲಾರ, ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ ಹಾಗೂ MYRADA, ಸರ್ಕಾರೇತರ ಸಂಸ್ಥೆ ಕೋಲಾರ ಇವರ ಸಹಯೋಗದಲ್ಲಿ **"ಜೈ ಕಿಸಾನ್ ಜೈ ವಿಜ್ಞಾನ"** ಘೋಷವಾಕ್ಯದೊಂದಿಗೆ ರೈತ ದಿನಾಚರಣೆಯನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀಮತಿ ಗೀತಮ್ಮ ಜಿ. ಆನಂದರೆಡ್ಡಿ, ಅಧ್ಯಕ್ಷರು, ಜಿಲ್ಲಾ ಪಂಚಾಯತ್, ಕೋಲಾರರವರು ನೆರವೇರಿಸಿ ರೈತರು ಇತ್ತೀಚಿನ ತಾಂತ್ರಿಕತೆಗಳನ್ನು ಅಳವಡಿಸಿಕೊಂಡು ಸಮಗ್ರ ಕೃಷಿ ಮಾಡುವುದರಿಂದ ಹೆಚ್ಚಿನ ಆದಾಯಗೊಳಿಸಬಹುದೆಂದು ತಿಳಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀ. ವಡಗೂರು ಡಿ.ಎಲ್. ನಾಗರಾಜ್, ಜಿಲ್ಲಾಧ್ಯಕ್ಷರು, ಕರ್ನಾಟಕ ಪ್ರದೇಶ ಕೃಷಿಕ ಸಮಾಜ, ಕೋಲಾರ, ಡಾ. ಶಿವಕುಮಾರ್ ಹೆಚ್.ಕೆ, ಜಂಟಿ ನಿರ್ದೇಶಕರು, ಕೃಷಿ ಇಲಾಖೆ, ಕೋಲಾರ, ಶ್ರೀ ಎಂ.ಎಸ್. ರಾಜು, ಉಪನಿರ್ದೇಶಕರು, ತೋಟಗಾರಿಕೆ ಇಲಾಖೆ, ಕೋಲಾರ, ಶ್ರೀ. ಶಿವಶಂಕರ್, ಯೋಜನಾ ಕಾರ್ಯಕ್ರಮ ಅಧಿಕಾರಿಗಳು, MYRADA, ಕೋಲಾರ, ತಾಲ್ಲೂಕು ಪಂಚಾಯತ್ ಸದಸ್ಯರಾದ ಗೋಪಾಲಗೌಡ, ಮಂಜುನಾಥ ಹಾಗೂ ಮುರಳಿ, ಹೋಳೂರು ಗ್ರಾಮ ಪಂಚಾಯತಿ ಅಧ್ಯಕ್ಷರು

ಮುನಿನಾರಾಯಣಸ್ವಾಮಿ, ಉಪಾಧ್ಯಕ್ಷರಾದ ರಮೇಶ್ ಹಾಗೂ ಸದಸ್ಯರಾದ ನಾಗರಾಜರವರು ಭಾಗವಹಿಸಿದ್ದರು. ಸದರಿ ಕಾರ್ಯಕ್ರಮದಲ್ಲಿ ರಫ್ತಿಗಾಗಿ ಮಾವಿನ ಹಣ್ಣಿನ ಗುಣಮಟ್ಟ ಮತ್ತು ಕೊಯ್ಲೋತ್ತರ ನಿರ್ವಹಣೆ ಹಾಗೂ ಮಾವಿನಲ್ಲಿ ಸಮಗ್ರ ಪೀಡೆ ನಿರ್ವಹಣೆ ಬಗ್ಗೆ ಡಾ. ವೈ. ಟಿ.ಎನ್. ರೆಡ್ಡಿ





ನಿವೃತ್ತ ಪ್ರಧಾನ ಸಂಶೋಧಕರು, ಭಾರತೀಯ ತೋಟಗಾರಿಕೆ ಸಂಶೋಧನಾ ಕೇಂದ್ರ, ಬೆಂಗಳೂರು, ಡಾ. ರಘುನಾಥರೆಡ್ಡಿ ಆರ್.ಎಲ್, ವಿಜ್ಞಾನಿ (ಮಣ್ಣು ವಿಜ್ಞಾನ) ಹಾಗೂ ಕೆ ತುಳಸಿರಾಮ್, ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರು, ಕೃಷಿ ವಿಜ್ಞಾನ ಕೇಂದ್ರ, ಕೋಲಾರ ಇವರು ರೈತರಿಗೆ ಸವಿವರವಾದ ಮಾಹಿತಿಯನ್ನು ನೀಡಿದರು. ಸದರಿ ಕಾರ್ಯಕ್ರಮದಲ್ಲಿ ಕೃಷಿ ವಿಜ್ಞಾನ ಕೇಂದ್ರದ ಎಲ್ಲ ವಿಜ್ಞಾನಿಗಳು, ಕೃಷಿ ಮತ್ತು ತೋಟಗಾರಿಕೆ ಇಲಾಖೆಯ ಅಧಿಕಾರಿಗಳು ಭಾಗವಹಿಸಿದ್ದರು.  ಸುಮಾರು 300 ರೈತರು ರೈತ ದಿನಾಚರಣೆಯಲ್ಲಿ ಪಾಲ್ಗೊಂಡು ಇದರ ಉಪಯೋಗವನ್ನು ಪಡೆದುಕೊಂಡರು.



ಕೃಷಿ ವಿಜ್ಞಾನ ಕೇಂದ್ರ ಕೋಲಾರದಲ್ಲಿ **"ನೆಲ್ಲಿಕಾಯಿಯ ಮೌಲ್ಯವರ್ಧನೆಯಿಂದ ಆರ್ಥಿಕ ಸ್ವಾವಲಂಬನೆ"** ತರಬೇತಿ ಕಾರ್ಯಕ್ರಮವನ್ನು ಸ್ವಸಹಾಯ ಸಂಘದ ಮಹಿಳೆಯರಿಗೆ ದಿನಾಂಕ 8.10.2016 ರಂದು ಹಮ್ಮಿಕೊಳ್ಳಲಾಗಿತ್ತು.  ಡಾ. ಜಿ.ಎಸ್. ಚಿಕ್ಕಣ್ಣ, ವಿಜ್ಞಾನಿ (ಗೃಹ ವಿಜ್ಞಾನ) ರವರು ಬೆಟ್ಟದ ನೆಲ್ಲಿಕಾಯಿಯ ಮೌಲ್ಯವರ್ಧಿತ ಪದಾರ್ಥಗಳಾದ ಜಾಮ್, ಮೊರಬ್ಬ, ಕ್ಯಾಂಡಿ, ಜ್ಯೂಸ್  ತಯಾರಿಕೆಯನ್ನು ಪ್ರಾತ್ಯಕ್ಷಿಕೆ ಮೂಲಕ ತೋರಿಸಿಕೊಟ್ಟರು. ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥರಾದ ಕೆ. ತುಳಸಿರಾಮ್‌ರವರು ಉದ್ಘಾಟನೆಯನ್ನು ನೆರವೇರಿಸಿ ನೆಲ್ಲಿಕಾಯಿಯ ಪ್ರಾಮುಖ್ಯತೆಯ ಬಗ್ಗೆ ತಿಳಿಸಿದರು. ಸುಮಾರು 20 ಸ್ವಸಹಾಯ ಸಂಘದ ಮಹಿಳಾ ಸದಸ್ಯರು ಈ ತರಬೇತಿಯ ಪ್ರಯೋಜನ ಪಡೆದುಕೊಂಡರು.

ಕೃಷಿ ವಿಜ್ಞಾನ ಕೇಂದ್ರ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕೋಲಾರ ಇವರ ಸಂಯುಕ್ತಾಶ್ರಯದಲ್ಲಿ ಅಂಗನವಾಡಿ ಕಾರ್ಯಕರ್ತೆಯರಿಗೆ **"ಆರೋಗ್ಯ ಕಾಪಾಡುವಲ್ಲಿ ಸಮತೋಲಿತ ಆಹಾರದ ಮಹತ್ವ"**ದ ಬಗ್ಗೆ  ದಿನಾಂಕ 19.11.2016 ರಿಂದ 29.11.2016 ರವರೆಗೆ 06 ದಿನಗಳ ಸಪ್ತಾಹ ಕಾರ್ಯಕ್ರಮವನ್ನು ಕೃಷಿ ವಿಜ್ಞಾನ ಕೇಂದ್ರ, ಕೋಲಾರ, ಮಾಲೂರು, ಬಂಗಾರಪೇಟೆ, ಮುಳಬಾಗಿಲು ಮತ್ತು ಶ್ರೀನಿವಾಸಪುರ ತಾಲೂಕುಗಳಲ್ಲಿ ಹಮ್ಮಿಕೊಳ್ಳಲಾಗಿತ್ತು. ಡಾ. ಚಿಕ್ಕಣ್ಣ ಜಿ.ಎಸ್, ವಿಜ್ಞಾನಿ (ಗೃಹ ವಿಜ್ಞಾನ) ಆರೋಗ್ಯ ಕಾಪಾಡುವಲ್ಲಿ ಸಮತೋಲಿತ ಆಹಾರದ ಮಹತ್ವ, ಉತ್ತಮ ಆರೋಗ್ಯದಲ್ಲಿ ಹಣ್ಣು ಮತ್ತು ತರಕಾರಿಗಳ ಪಾತ್ರ, ಪೂರ್ವ ಶಾಲಾ ಮಕ್ಕಳ ಆರೋಗ್ಯ ಮತ್ತು ಸ್ವಚ್ಚತೆ ಹಾಗೂ ಗ್ರಾಮೀಣ ಪ್ರದೇಶದಲ್ಲಿ ಮಕ್ಕಳು ಮತ್ತು ಮಹಿಳೆಯರಿಗೆ ಅಪೌಷ್ಟಿಕತೆಗೆ ಕಾರಣಗಳು ಮತ್ತು ಪರಿಹಾರಗಳ ಬಗ್ಗೆ ಮಾಹಿತಿ ನೀಡಿದರು.  ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳು ಭಾಗವಹಿಸಿ ಮಹಿಳೆ ಮತ್ತು ಮಕ್ಕಳ ಆರೋಗ್ಯವನ್ನು ಕಾಪಾಡಿಕೊಳ್ಳುವ ಬಗ್ಗೆ ಮಾಹಿತಿ ನೀಡಿದರು.





ಕೃಷಿ ವಿಜ್ಞಾನ ಕೇಂದ್ರ ವತಿಯಿಂದ ದಿನಾಂಕ 5.10.2016 ಹಾಗೂ 19.10.2016ರಂದು ಶ್ರೀನಿವಾಸಪುರ ಮತ್ತು ಮಾಲೂರು ತಾಲ್ಲೂಕು ವ್ಯಾಪ್ತಿಯ ರೇಷ್ಮೆ ಬೆಳೆಗಾರರಿಗೆ **"ಹಿಪ್ಪುನೇರಳೆ ಮರ ಬೇಸಾಯ ಪದ್ಧತಿಯ ಪ್ರಯೋಜನ ಹಾಗೂ ದ್ವಿತಳಿ ಹುಳು ಸಾಕಾಣಿಕೆಯಲ್ಲಿ ಉತ್ಪಾದನಾ ತಾಂತ್ರಿಕತೆ"** ಬಗ್ಗೆ ತರಬೇತಿ ಕಾರ್ಯಕ್ರಮವನ್ನು ತೋಟಗಾರಿಕೆ ಮಹಾವಿದ್ಯಾಲಯದ ವಿಚಾರ ಸಂಕಿರಣ ಕೊಠಡಿಯಲ್ಲಿ ಆಯೋಜಿಸಲಾಗಿತ್ತು. ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳಾದ ಡಾ. ರಘುನಾಥರೆಡ್ಡಿ ಆರ್.ಎಲ್ ಮತ್ತು ಡಾ. ಶಶಿಧರ್ ಕೆ.ಆರ್, ರವರು ಹಿಪ್ಪುನೇರಳೆ ಬೇಸಾಯದಲ್ಲಿ ಸಮಗ್ರ ಪೋಷಕಾಂಶಗಳ ನಿರ್ವಹಣೆ ಹಾಗೂ ಹಿಪ್ಪುನೇರಳೆ ಮರಗಳ ಬೇಸಾಯ ಪದ್ಧತಿ ಮತ್ತು ದ್ವಿತಳಿ ರೇಷ್ಮೆಹುಳು ಸಾಕಾಣಿಕಾ ತಾಂತ್ರಿಕತೆಗಳ ಬಗ್ಗೆ ಮಾಹಿತಿ ನೀಡಿದರು. ಶ್ರೀ. ಸುರೇಶ ಸಿರಿಕೇರ್ ಪ್ರೈ.ಲಿ. ಇವರು ರೇಷ್ಮೆಹುಳು ಸಾಕಾಣಿಕೆಯಲ್ಲಿ ಸೋಂಕು ನಿವಾರಕಗಳ ಮಹತ್ವ ಮತ್ತು ಬಳಕೆಯ ಬಗ್ಗೆ ಮಾಹಿತಿ ತಿಳಿಸಿದರು. ಡಾ. ಹೆಚ್. ಎಂ. ಸಂತೋಷ್, ಡಾ. ನಾಗರಾಜ ಕೆ.ಎಸ್, ಶ್ರೀ ಉಮೇಶ್‌ನಾಯ್ಕ, ರೇಷ್ಮೆ ಇಲಾಖೆ ಅಧಿಕಾರಿಗಳು ಮತ್ತು ಸುಮಾರು 60 ರೇಷ್ಮೆ ಬೆಳೆಗಾರರು ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



ಸ್ವಸಹಾಯ ಸಂಘದ ಮಹಿಳೆಯರಿಗೆ **"ಹಲಸಿನ ಮೌಲ್ಯವರ್ಧಿತ ಪದಾರ್ಥಗಳ ತಯಾರಿಕೆ, ಅರೆಸಂಸ್ಕರಣೆ, ಪ್ಯಾಕೆಜಿಂಗ್ ಮತ್ತು ಮಾರಾಟ"** ಸಂಬಂಧಿಸಿದಂತೆ ಮೂರು ದಿನಗಳ ತರಬೇತಿ ಕಾರ್ಯಕ್ರಮವನ್ನು ದಿನಾಂಕ 12.12.2016 ರಿಂದ 15.12.2016 ರವರೆಗೆ ಕೃಷಿ ವಿಜ್ಞಾನ ಕೇಂದ್ರ, ಕೋಲಾರವು ಹಮ್ಮಿಕೊಳ್ಳಲಾಗಿತ್ತು. ಗೃಹ ವಿಜ್ಞಾನ ವಿಷಯದ ವಿಜ್ಞಾನಿಗಳಾದ ಡಾ. ಚಿಕ್ಕಣ್ಣ ಜಿ.ಎಸ್‌ರವರು ಅರೆಸಂಸ್ಕರಣೆಯ ಮಹತ್ವ ಮತ್ತು ಮೌಲ್ಯವರ್ಧಿತ ಪದಾರ್ಥಗಳ ತಯಾರಿಕೆ ಪ್ರಾತ್ಯಕ್ಷಿಕೆ ಹಾಗೂ ಪ್ಯಾಕೆಜಿಂಗ್, ಲೇಬಲಿಂಗ್ ಮತ್ತು ಮಾರಾಟದ ಬಗ್ಗೆ ಸ್ವಸಹಾಯ ಸಂಘದ ಮಹಿಳೆಯರಲ್ಲಿ ಪ್ರಾತ್ಯಕ್ಷಿಕೆ ಮೂಲಕ ಮಾಡಿ ತೋರಿಸಿದರು. ಕೃಷಿ ವಿಜ್ಞಾನ ಕೇಂದ್ರದ, ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರಾದ ಕೆ. ತುಳಸಿರಾಮ್‌ರವರು ಕಾರ್ಯಕ್ರಮದಲ್ಲಿ ಭಾಗವಹಿಸಿ ಮೌಲ್ಯವರ್ಧಿತ ಪದಾರ್ಥಗಳ ಅನುಕೂಲತೆಗಳ ಬಗ್ಗೆ ಮಾಹಿತಿ ನೀಡಿದರು. ಸುಮಾರು 15 ಸ್ವಸಹಾಯ ಸಂಘದ ಮಹಿಳೆಯರು ಈ ತರಬೇತಿಯ ಪ್ರಯೋಜನ ಪಡೆದುಕೊಂಡರು.



ದಿನಾಂಕ: 19.10.2016 ರಂದು ಕೃಷಿ ವಿಜ್ಞಾನ ಕೇಂದ್ರ, ಕೋಲಾರ ಮತ್ತು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ, ಶ್ರೀನಿವಾಸಪುರ ಇವರ ಸಹಯೋಗದಲ್ಲಿ **"ಮಾವು ಬೆಳೆಯಲ್ಲಿ ಆಧುನಿಕ ಬೇಸಾಯ ಕ್ರಮಗಳು, ಕೊಯ್ಲೋತ್ತರ ತಂತ್ರಜ್ಞಾನ ಹಾಗೂ ಸಂಸ್ಕರಣೆ"** ಬಗ್ಗೆ ಚಿರುವನಹಳ್ಳಿ ಗ್ರಾಮದಲ್ಲಿ ಮಾವು ಬೆಳೆಗಾರರಿಗೆ ವಿಚಾರ ಸಂಕಿರಣ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಸದರಿ ಕಾರ್ಯಕ್ರಮದಲ್ಲಿ ಕೃಷಿ ವಿಜ್ಞಾನ ಕೇಂದ್ರ, ಕೋಲಾರದ ಮುಖ್ಯಸ್ಥರಾದ ಕೆ. ತುಳಸಿರಾಮ್‌ರವರು ಕೃಷಿ ಮತ್ತು ತೋಟಗಾರಿಕೆ ಬೆಳೆಗಳಲ್ಲಿ ಸುರಕ್ಷಿತ ಕೀಟನಾಶಕಗಳ ಬಳಕೆ, ಮಾವು ಬೆಳೆಯಲ್ಲಿ ಸಮಗ್ರ ಪೀಡೆ ನಿರ್ವಹಣೆ ಬಗ್ಗೆ ಮಾಹಿತಿ ನೀಡಿದರು. ತೋಟಗಾರಿಕೆ ವಿಜ್ಞಾನಿಗಳಾದ ಡಾ. ಸಂತೋಷ್ ಹೆಚ್. ಎಂ. ರವರು ಮಾವಿನ ಬೆಳೆಯಲ್ಲಿ ಆಧುನಿಕ ಬೇಸಾಯ ಕ್ರಮಗಳು, ಕೊಯ್ಲೋತ್ತರ ತಂತ್ರಜ್ಞಾನ ಹಾಗೂ ಸಂಸ್ಕರಣೆ ಬಗ್ಗೆ ರೈತರಿಗೆ ಮಾಹಿತಿ ನೀಡಿದರು. ಸದರಿ ಕಾರ್ಯಕ್ರಮದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯ ಜಿಲ್ಲಾ ಯೋಜನಾಧಿಕಾರಿ ಶ್ರೀ ವಿಜಯಕುಮಾರ್ ಹಾಗೂ ಸ್ಥಳೀಯ ಜನಪ್ರತಿನಿಧಿಗಳು ಹಾಗೂ ಸುಮಾರು 250 ಮಾವು ಬೆಳೆಗಾರರು ಭಾಗವಹಿಸಿ ಪ್ರಯೋಜನವನ್ನು ಪಡೆದರು.



## ತ್ರೈಮಾಸಿಕ ಕಾರ್ಯಾಗಾರ

ದಿನಾಂಕ 18.11.2016 ರಂದು ತೋಟಗಾರಿಕೆ ಮಹಾವಿದ್ಯಾಲಯ ಮತ್ತು ಕೃಷಿ ವಿಜ್ಞಾನ ಕೇಂದ್ರ, ಕೋಲಾರ ಇವರ ಸಹಯೋಗದಲ್ಲಿ ಕೋಲಾರ, ಚಿಕ್ಕಬಳ್ಳಾಪುರ ಮತ್ತು ರಾಮನಗರ ಜಿಲ್ಲೆಯ ತೋಟಗಾರಿಕೆ ಇಲಾಖೆಯ ಅಧಿಕಾರಿಗಳಿಗೆ ತ್ರೈಮಾಸಿಕ ಕಾರ್ಯಾಗಾರವನ್ನು ಏರ್ಪಡಿಸಲಾಗಿತ್ತು. ಸದರಿ ಕಾರ್ಯಕ್ರಮದಲ್ಲಿ ತೋಟಗಾರಿಕೆ ಇಲಾಖೆಯ ಉಪನಿರ್ದೇಶಕರುಗಳು ಮತ್ತು ಅಧಿಕಾರಿಗಳು ಭಾಗವಹಿಸಿದ್ದರು. ಈ ಕಾರ್ಯಾಗಾರದಲ್ಲಿ ಡಾ. ವಿ ಕೃಷ್ಣಮನೋಹರ್, ಪ್ರಾಧ್ಯಾಪಕರು, ತೋಟಗಾರಿಕೆ ವಿಭಾಗ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಇವರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ ತೋಟಗಾರಿಕೆ ಬೆಳೆಯಲ್ಲಿ ಹನಿ ಹಾಗೂ ಸಿಂಚನ ನೀರಾವರಿ ನಿರ್ವಹಣೆಯ ಬಗ್ಗೆ ತಾಂತ್ರಿಕ ಮಾಹಿತಿಯನ್ನು ತಿಳಿಸಿಕೊಟ್ಟರು. ನಂತರ ಕೆ. ತುಳಸಿರಾಮ್, ಹಿರಿಯ ವಿಜ್ಞಾನಿಗಳು ಮತ್ತು ಮುಖ್ಯಸ್ಥರು ಇವರು ತೋಟಗಾರಿಕೆ ಬೆಳೆಗಳ ಸಮಗ್ರ ಕೀಟ ನಿರ್ವಹಣೆ ಬಗ್ಗೆ ತಿಳಿಸಿದರು. ಡಾ. ನಾಗರಾಜ ಕೆ.ಎಸ್. ತೋಟಗಾರಿಕೆ ವಿಜ್ಞಾನಿಗಳು ಬಾಳೆ ಬೆಳೆಯಲ್ಲಿ ಆಧುನಿಕ ಬೇಸಾಯ ಕ್ರಮಗಳು. ಸಹಾಯಕ ಪ್ರಾಧ್ಯಾಪಕರಾದ ಡಾ. ಜೆ. ಅರವಿಂದಕುಮಾರ್ ಮತ್ತು ಡಾ. ಟಿ.ಬಿ. ಮಂಜುನಾಥರೆಡ್ಡಿ ರವರು ತೋಟಗಾರಿಕೆ ಬೆಳೆಗಳ ಉತ್ಪಾದನ ತಾಂತ್ರಿಕತೆಗಳು ಮತ್ತು ರೋಗ ನಿರ್ವಹಣೆ ಬಗ್ಗೆ ಮಾಹಿತಿ ನೀಡಿದರು. ಸಭೆಯಲ್ಲಿ ಹಲವಾರು ಸಹಾಯಕ ತೋಟಗಾರಿಕೆ ಅಧಿಕಾರಿಗಳು ತಂದಿರುವ ಬಾಧೆಗೊಳಗಾದ ವಿವಿಧ ಬೆಳೆಗಳ ಮಾದರಿಗಳನ್ನು ಚರ್ಚಿಸಿ ಸೂಕ್ತ ಪರಿಹಾರವನ್ನು ನೀಡಲಾಯಿತು. ಸುಮಾರು 60 ಹಿರಿಯ ಅಧಿಕಾರಿ ವರ್ಗದವರು ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು.



## ಕ್ಷೇತ್ರೋತ್ಸವ

ಕೃಷಿ ವಿಜ್ಞಾನ ಕೇಂದ್ರ ಮುಂಚೂಣಿ ಪ್ರಾತ್ಯಕ್ಷಿಕೆ ಮತ್ತು ತಂತ್ರಜ್ಞಾನ ಮರುಪರಿಶೀಲನೆ ಪೂರ್ಣಗೊಳಿಸಿದ ಗ್ರಾಮಗಳಲ್ಲಿ ರೇಷ್ಮೆ ಕೃಷಿಯ ಕ್ಷೇತ್ರೋತ್ಸವಗಳನ್ನು ಆಯೋಜಿಸಲಾಗಿತ್ತು. ಸದರಿ ಕಾರ್ಯಕ್ರಮಗಳಲ್ಲಿ ಕೃಷಿ ವಿಜ್ಞಾನ ಕೇಂದ್ರ, ಕೋಲಾರದ ವಿಜ್ಞಾನಿಗಳಾದ ಡಾ. ಶಶಿಧರ್ ಕೆ.ಆರ್, ಡಾ. ಸಂತೋಷ್ ಹೆಚ್. ಎಂ. ಹಾಗೂ ಕ್ಷೇತ್ರ ವ್ಯವಸ್ಥಪಕರಾದ ಶ್ರೀ ಉಮೇಶ ನಾಯ್ಕ ಭಾಗವಹಿಸಿ ರೈತರಿಗೆ ನೂತನ ತಂತ್ರಜ್ಞಾನಗಳ ಉಪಯೋಗಗಳ ಬಗ್ಗೆ ಮಾಹಿತಿಯನ್ನು ನೀಡಿದರು. ಸದರಿ ಕಾರ್ಯಕ್ರಮದಲ್ಲಿ 75 ರೈತರು ಹಾಜರಿದ್ದು ಇದರ ಸದುಪಯೋಗವನ್ನು ಪಡೆದುಕೊಂಡರು.





| ಕ್ರ.ಸಂ | ದಿನಾಂಕ | ಗ್ರಾಮ | ವಿಷಯ | ಭಾಗವಹಿಸಿದ ರೈತರ ಸಂಖ್ಯೆ |
|---|---|---|---|---|
| 1 | 18.10.2016 | ಬಳಗೆರೆ | ಹಿಪ್ಪುನೇರಳೆಯಲ್ಲಿ ಸಮಗ್ರ ಪೋಷಕಾಂಶಗಳ ನಿರ್ವಹಣೆ ಮತ್ತು ರೇಷ್ಮೆ ಹುಳುವಿನ ಬೆಳವಣಿಗೆಯಲ್ಲಿ ಸೆರಿಮೋರ್ ಬಳಕೆ | 25 |
| 2 | 28.10.2016 | ನಡುಪಳ್ಳಿ | ಗುಣಮಟ್ಟದ ಗೂಡು ಉತ್ಪಾದನೆಯಲ್ಲಿ ವಿವಿಧ ಚಂದ್ರಿಕೆಗಳ ಮಹತ್ವ | 25 |
| 3 | 02.11.2016 | ತೊರಗನದೊಡ್ಡಿ | ನೂತನ ಫಲದಾಯಕ $FC_2xFC_1$ ಬೈವೊಲ್ಟಿನ್ ಡಬಲ್ ಹೈಬ್ರಿಡ್ ತಳಿ | 25 |

## ತೋಟಗಾರಿಕೆ ಮೇಳದಲ್ಲಿ ಭಾಗಿ



ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ ವತಿಯಿಂದ ದಿನಾಂಕ 16.12.2016 ರಿಂದ 19.12.2016 ರವರೆಗೆ ಏರ್ಪಡಿಸಿದ್ದ ತೋಟಗಾರಿಕೆ ಮೇಳದಲ್ಲಿ ಕೃಷಿ ವಿಜ್ಞಾನ ಕೇಂದ್ರ, ಕೋಲಾರ, ಭಾಗವಹಿಸಿ ಜಿಲ್ಲೆಯ ತೋಟಗಾರಿಕೆ ಕ್ಷೇತ್ರದಲ್ಲಿನ ಸಾಧನೆಯ ಮಾಹಿತಿ ಫಲಕಗಳು, ಸಜೀವ ಮಾದರಿಗಳು, ಬಿತ್ತಿಪತ್ರಗಳನ್ನು ಪ್ರದರ್ಶಿಸಲಾಯಿತು. ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥರಾದ. ಕೆ. ತುಳಸಿರಾಮ್, ವಿಜ್ಞಾನಿಗಳಾದ ಡಾ. ರಘುನಾಥರೆಡ್ಡಿ ಆರ್ ಎಲ್, ಡಾ. ಕೆ.ಆರ್. ಶಶಿಧರ್, ಡಾ. ನಾಗರಾಜ ಕೆ.ಎಸ್ ಮತ್ತು ಡಾ. ಚಿಕ್ಕಣ್ಣ ಜಿ.ಎಸ್‌ರವರು ಮೇಳದಲ್ಲಿ ಭಾಗವಹಿಸಿ ರೈತರಿಗೆ ತಾಂತ್ರಿಕ ಮಾಹಿತಿಗಳನ್ನು ನೀಡಿದರು.

## 2016ನೇ ಸಾಲಿನ ಜಿಲ್ಲಾ ಶ್ರೇಷ್ಠ ತೋಟಗಾರಿಕೆ ರೈತ ಪ್ರಶಸ್ತಿ

2016–17ನೇ ಸಾಲಿನ ಜಿಲ್ಲಾ ಶ್ರೇಷ್ಠ ತೋಟಗಾರಿಕೆ ರೈತ ಪ್ರಶಸ್ತಿಯನ್ನು ಕೋಲಾರ ಜಿಲ್ಲೆಯ ಬಂಗಾರಪೇಟೆ ತಾಲ್ಲೂಕಿನ ಅಕ್ಕಮ್ಮನದಿನ್ನೆ ಗ್ರಾಮದ ರೈತರಾದ ಜಿ. ವೆಂಕಟೇಶಪ್ಪ ತಂದೆ ಗುರಪ್ಪ ಇವರಿಗೆ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬಾಗಲಕೋಟೆಯಲ್ಲಿ ದಿನಾಂಕ



16.12.2016 ರಿಂದ 19.12.2016 ರವರೆಗೆ ನಡೆದ ತೋಟಗಾರಿಕೆ ಮೇಳದಲ್ಲಿ **"ಜಿಲ್ಲಾ ಶ್ರೇಷ್ಠ ತೋಟಗಾರಿಕೆ ರೈತ ಪ್ರಶಸ್ತಿ"** ಯನ್ನು ನೀಡಿ ಸನ್ಮಾನಿಸಲಾಯಿತು. ಸದರಿ ರೈತರು ನೀರಿನ ಸಂರಕ್ಷಣೆಗೆ ಕೃಷಿ ಹೊಂಡ ನಿರ್ಮಾಣ ಮಾಡಿ ಅಂತರ ಬೆಳೆಯಾಗಿ ಹುರುಳಿಕಾಯಿ, ಹಿರೇಕಾಯಿ, ಹಾಗಲಕಾಯಿ ಹಾಗೂ ಸೋರೆಕಾಯಿ ಬೇಸಾಯ ಮಾಡುತ್ತಿದ್ದಾರೆ. ಮಣ್ಣಿನ ಫಲವತ್ತತೆಗೆ ಕೊಟ್ಟಿಗೆ ಗೊಬ್ಬರ, ಜೈವಿಕ ಗೊಬ್ಬರ ಬಳಕೆ, ಕುರಿ ಸಾಕಾಣಿಕೆ, ತರಕಾರಿ ನರ್ಸರಿ, ರೇಷ್ಮೆ ಕೃಷಿ ಹಾಗೂ ನಾಟಿ ಕೋಳಿ ಸಾಕಾಣಿಕೆ ಮಾಡಿ ಉದ್ಯಮಶೀಲರಾಗಿದ್ದು, ಸಮಗ್ರ ಕೃಷಿ ಪದ್ಧತಿಗೆ ಒತ್ತು ನೀಡಿ ಈ ಭಾಗದ ರೈತರಿಗೆ ಮಾದರಿಯಾಗಿದ್ದಾರೆ.

## ಸಮಸ್ಯಾತ್ಮಕ ಕ್ಷೇತ್ರಗಳ ಭೇಟಿ :

ದಿನಾಂಕ 20.10.2016 ಹಾಗೂ ದಿನಾಂಕ 4.11.2016 ರಂದು ಚಿಂತಾಮಣಿ ತಾಲ್ಲೂಕಿನ ಬುಕ್ಕನಹಳ್ಳಿ, ಮಿಂಡಿಗಲ್ ಮತ್ತು ನೆರ್ನಹಳ್ಳಿ





ಗ್ರಾಮಗಳಲ್ಲಿ ಕ್ಯಾರೆಟ್ ಬೆಳೆಯು ಸೀಳು ಬಿಟ್ಟಿರುವ ಸಮಸ್ಯಾತ್ಮಕ ತಾಕುಗಳಿಗೆ ಕೃಷಿ ವಿಜ್ಞಾನ ಕೇಂದ್ರ ಕೋಲಾರದ ವಿಜ್ಞಾನಿಗಳಾದ ಡಾ. ನಾಗರಾಜ ಕೆ. ಎಸ್, ಡಾ. ಸದಾನಂದ ಮುಶ್ರೀಫ್, ಡಾ. ಟಿ.ಬಿ. ಮಂಜುನಾಥರೆಡ್ಡಿ, ಡಾ. ಅರವಿಂದಕುಮಾರ್ ಜೆ.ಎಸ್ ಹಾಗೂ ತೋಟಗಾರಿಕೆ ಇಲಾಖೆ ಅಧಿಕಾರಿಗಳ ಜೊತೆ ಭೇಟಿ ನೀಡಿ ಸಮಸ್ಯೆಯ ಪ್ರಮುಖ ಕಾರಣಗಳನ್ನು ಪರಿಶೀಲಿಸಿ ಸೂಕ್ತ ನಿರ್ವಹಣಾ ಕ್ರಮಗಳ ಬಗ್ಗೆ ಮಾಹಿತಿಯನ್ನು ರೈತರಿಗೆ ನೀಡಲಾಯಿತು.

## ಪಶು ಚಿಕಿತ್ಸಾ ಶಿಬಿರ



ದಿನಾಂಕ 25.12.2016 ರಂದು ಕೃಷಿ ವಿಜ್ಞಾನ ಕೇಂದ್ರ, ಕೋಲಾರ ಮತ್ತು ಪಶು ಚಿಕಿತ್ಸಾಲಯ, ಮದನಹಳ್ಳಿ ಇವರ ಸಹಯೋಗದಲ್ಲಿ **"ಪಶು ಚಿಕಿತ್ಸಾ ಶಿಬಿರ"** ವನ್ನು ಮುಳ್ಳಹಳ್ಳಿ ಗ್ರಾಮದಲ್ಲಿ ಏರ್ಪಡಿಸಲಾಗಿತ್ತು. ಸದರಿ ಕಾರ್ಯಕ್ರಮದಲ್ಲಿ ಸುಮಾರು 40 ಹಸು, ಎಮ್ಮೆ ಕರುಗಳಿಗೆ ಮತ್ತು 600 ಕುರಿಗಳಿಗೆ ಜಂತು ನಾಶಕ ಔಷಧಿ ವಿತರಿಸಲಾಯಿತು. ಸುಮಾರು 35 ರಾಸುಗಳಿಗೆ ಬಂಜೆತನ ನಿವಾರಣೆ ಚಿಕಿತ್ಸೆ ಹಾಗೂ 60 ರಾಸುಗಳಿಗೆ ಹಾಲಿನಲ್ಲಿ ಕಬ್ಬಿಣಾಂಶ ಹಾಗೂ ಡಿಗ್ರಿ ತಪಾಸಣೆ ಮಾಡಲಾಗಿ ಭಾದೆಗೊಳಪಟ್ಟ ರಾಸುಗಳಿಗೆ ಲವಣ ಮಿಶ್ರಿತ ಪುಡಿಯನ್ನು ನೀಡಲಾಯಿತು. ಡಾ. ಪ್ರೇಮಕುಮಾರ್ ಮತ್ತು ಡಾ. ಪ್ರಸನ್ನಕುಮಾರ, ಪಶು ವೈದ್ಯಾಧಿಕಾರಿಗಳು, ಪಶು ಚಿಕಿತ್ಸಾಲಯ, ಮದನಹಳ್ಳಿ ಮತ್ತು ಸಿಬ್ಬಂದಿಗಳು ಶಿಬಿರದಲ್ಲಿ ಭಾಗವಹಿಸಿ ಪಶು ತಪಾಸಣೆ ನಡೆಸಿದರು. ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳಾದ ಡಾ. ಶಶಿಧರ್. ಕೆ.ಆರ್ ಮತ್ತು ಡಾ. ಕೆ.ಎಸ್. ನಾಗರಾಜ ಭಾಗವಹಿಸಿ ಪಶು ಚಿಕಿತ್ಸಾ ಶಿಬಿರದ ಮಹತ್ವದ ಬಗ್ಗೆ ರೈತರಿಗೆ ಮಾಹಿತಿ ನೀಡಿದರು. ಸದರಿ ಕಾರ್ಯಕ್ರಮದಲ್ಲಿ ಹಾಲು ಉತ್ಪಾದಕರ ಸಂಘದ ಅಧ್ಯಕ್ಷರು, ಕಾರ್ಯದರ್ಶಿಗಳು ಮತ್ತು ಗ್ರಾಮಸ್ಥರು ಭಾಗವಹಿಸಿ ಪಶು ಆರೋಗ್ಯ ಶಿಭಿರದ ಸದುಪಯೋಗವನ್ನು ಪಡೆದುಕೊಂಡರು.

## ಪದ್ಧತಿ ಪ್ರಾತ್ಯಕ್ಷಿಕೆ



ದಿನಾಂಕ 07.10.2016 ರಂದು ಬಳಗೆರೆ ಗ್ರಾಮದಲ್ಲಿ ರೇಷ್ಮೆ ಬೆಳೆಗಾರರಿಗೆ ಕೃಷಿ ವಿಜ್ಞಾನ ಕೇಂದ್ರ, ಕೋಲಾರದ ವತಿಯಿಂದ **ಸೆರಿಮೋರ್ ಬಳಕೆಯ ಬಗ್ಗೆ ಪದ್ಧತಿ** ಪ್ರಾತ್ಯಕ್ಷಿಕೆಯನ್ನು ಏರ್ಪಡಿಸಲಾಗಿತ್ತು. ಸದರಿ ಕಾರ್ಯಕ್ರಮದಲ್ಲಿ ರೇಷ್ಮೆ ಕೃಷಿ ತಜ್ಞರಾದ ಡಾ. ಕೆ.ಆರ್. ಶಶಿಧರ್ ಹಾಗೂ ಶ್ರೀ ಸುರೇಶ್, ಸೆರಿಕೇರ್ ಕಂಪನಿ, ಬೆಂಗಳೂರು ಮತ್ತು ಶ್ರೀ ಉಮೇಶ್ ನಾಯ್ಕ ಭಾಗವಹಿಸಿ ಸೆರಿಮೋರ್ ಬಳಕೆಯ ಅನುಕೂಲಗತೆಗಳು ಹಾಗೂ ರೇಷ್ಮೆಗೂಡಿನ ಇಳುವರಿ ಬಗ್ಗೆ ಮಾಹಿತಿ ನೀಡಿದರು. ಸದರಿ ಗ್ರಾಮದ 15 ರೇಷ್ಮೆ ಬೆಳೆಗಾರರು ಕಾರ್ಯಕ್ರಮದಲ್ಲಿ ಹಾಜರಿದ್ದು ಇದರ ಸದುಪಯೋಗವನ್ನು ಪಡೆದುಕೊಂಡರು.


| | | |
|---|---|---|
| **ಸಂಪಾದಕರು** | : | **ಕೆ. ತುಳಸಿರಾಮ್** |
| **ಸಹ ಸಂಪಾದಕರು** | : | **ಡಾ. ಶಶಿಧರ್ ಕೆ. ಆರ್.** |
| **ಸಹಾಯಕ ಸಂಪಾದಕರು** | : | **ಡಾ. ರಘುನಾಥರೆಡ್ಡಿ ಆರ್. ಎಲ್.**<br>**ಡಾ. ನಾಗರಾಜ ಕೆ. ಎಸ್.**<br>**ಡಾ. ಚಿಕ್ಕಣ್ಣ ಜಿ. ಎಸ್.**<br>**ಡಾ. ಸಂತೋಷ್ ಹೆಚ್. ಎಂ.**<br>**ಉಮೇಶ್ ನಾಯ್ಕ** |
| **ಪುಟ ವಿನ್ಯಾಸ** | : | **ಸಿ.ಎಸ್. ಜ್ಞಾನಸುಧ** |
| **ಅಕ್ಷರ ಜೋಡಣೆ** | : | **ಸಾವಿತ್ರಿ ಜಿ. ರುದ್ರಾಪೂರ** |

**ಪ್ರಕಾಶಕರು :**
**ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರು**
**ಐಸಿಎಆರ್ – ಕೃಷಿ ವಿಜ್ಞಾನ ಕೇಂದ್ರ, ಕೋಲಾರ–563 103**





**ಪ್ರತಿ ಸೋಮವಾರ – ರೈತರಿಗೆ ಪರಿಹಾರ**
**ಸ್ಥಳ : ತೋಟಗಾರಿಕೆ ಮಹಾವಿದ್ಯಾಲಯ, ಕೋಲಾರ**
**ಕೃಷಿ ವಿಜ್ಞಾನ ಕೇಂದ್ರ, ಕೋಲಾರ**
**ಸಮಯ : ಬೆಳಗ್ಗೆ 9.30 ರಿಂದ ಸಂಜೆ 4.30**